ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಜ್ಞಾನಜ್ಯೋತಿ–ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080–22961016 / 22131385 E-Mail ID: registrar@bcu.ac.in

ಸಂಖ್ಯೆ: ಬೆ.ನ.ವಿ./ಕು.ಸ./ಸಂಯೋಜನಾ/2025–26 ದಿನಾಂಕ:31.07.2025

# ಅಧಿಸೂಚನೆ

ವಿಷಯ : 2025–26ನೇ ಶೈಕ್ಷಣಿಕ ಸಾಲಿನ **St Francis College ,P.B No 3417, 8th Main 3rd Block Kormangala Bangalore-560034** ಇವರಿಗೆ ತಾತ್ಕಾಲಿಕ ಸಂಯೋಜನೆ ನವೀಕರಣ /ವಿದ್ಯಾರ್ಥಿ ಪ್ರಮಾಣ ಕಡತ/ ಹೊಸ ಶಾಶ್ವತ ಸಂಯೋಜನೆಯನ್ನು ನೀಡುವ ಬಗೆಗೆ.

ಉಲ್ಲೇಖ : 1. ವಿದ್ಯಾವಿಷಯಕ ಪರಿಷತ್ ಅನುಮೋದನೆ ದಿನಾಂಕ : 25.03.2025
2. ಸಿಂಡಿಕೇಟ್‌ನ ಅನುಮೋದನೆ ದಿನಾಂಕ: 27.03.2025
3. ಸರ್ಕಾರದ ಇ–ಕಛೇರಿ ಸಂ: ಇಡಿ 244 ಯುಬಿವಿ 2025, ದಿನಾಂಕ:25.07.2025
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:30.07.2025

* * *

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ **St Francis College ,P.B No 3417, 8th Main 3rd Block Kormangala Bangalore-560034** ಕಾಲೇಜಿಗೆ **2025–26**ನೇ ಸಾಲಿಗೆ ಈ ಕೆಳಕಂಡ ಕೋರ್ಸುಗಳಿಗೆ ಷರತ್ತಿಗೊಳಪಟ್ಟು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 62(1) ರನ್ವಯ ಹೊಸ ಶಾಶ್ವತ ಸಂಯೋಜನೆ, 59(18) ರನ್ವಯ ವಿದ್ಯಾರ್ಥಿ ಪ್ರಮಾಣ ಕಡತ ಹಾಗೂ 59(17) ರನ್ವಯ ಸಂಯೋಜನೆ ನವೀಕರಣವನ್ನು ನೀಡಲಾಗಿದೆ.

| ಕೋರ್ಸ್ | ವಿಷಯ, ಶಿಸ್ತಿನ/ಮೂಲ ವಿಷಯಗಳು ( Subject, Discipline / Core subjects) | ವಿದ್ಯಾರ್ಥಿ ಪ್ರಮಾಣ |
|---|---|---|
| **Renewal of Temporary Affiliation** | | |
| Bachelor of Commerce | Business Data Analytics | 60(ಅರವತ್ತು) |
| Bachelor of Commerce | Logistics and Supply Chain Management | 60(ಅರವತ್ತು) |
| Bachelor of Visual Arts | Animation and Game Art | 30(ಮೂವತ್ತು) |
| Master of Business Administration | Business Administration | 240(ಇನ್ನೂರ ನಲವತ್ತು) |
| Master of Computer Applications | Computer Applications | 120(ನೂರ ಇಪ್ಪತ್ತು) |
| Master of Commerce | Commerce | 40(ನಲವತ್ತು) |

| | | |
|---|---|---|
| **Fresh Permanent Affiliation** | | |
| Bachelor of Commerce** | Accounting and Finance | 120(ನೂರ ಇಪ್ಪತ್ತು) |
| Bachelor of Business Administration** | Aviation Management | 60(ಅರವತ್ತು) |
| Bachelor of Business Administration** | General | 120(ನೂರ ಇಪ್ಪತ್ತು) |
| Bachelor of Commerce** | General | 300(ಮುನ್ನೂರು) |
| Bachelor of Computer Applications** | General | 180(ನೂರ ಎಂಬತ್ತು) |
| Bachelor of Science** | Journalism, Psychology, Computer Science | 30(ಮೂವತ್ತು) |
| Bachelor of Science** | Interior Design and Decoration | 60-30=30(ಮೂವತ್ತು) |
| Bachelor of Arts** | Economics, English, Journalism | 80-40=40(ನಲವತ್ತು) |
| **Reduction of Intake** | | |
| Bachelor of Science | Interior Design and Decoration | 30(ಮೂವತ್ತು) |
| Bachelor of Arts | Economics, English, Journalism | 40(ನಲವತ್ತು) |

(** ಆಸ್ಟ್ರಚ್ ಗುರುತುಳ್ಳ ಕೋರ್ಸುಗಳಿಗೆ 2025–26ನೇ ಸಾಲಿನಿಂದ 2029–30ನೇ ಸಾಲಿನವರೆಗೆ ಐದು ವರ್ಷಗಳ ಅವಧಿಯ ಶಾಶ್ವತ ಸಂಯೋಜನೆಯನ್ನು ಹೊಂದಿರುತ್ತದೆ.)

---

<u>ವಿ.ಸೂ:</u> *2025–26ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗತ್ತಿಸಿದೆ. ಕಾಲೇಜುಗಳಿಗೆ ಸಿಂಡಿಕೇಟು ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 15 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.*

---

<u>ಷರತ್ತುಗಳು:</u>

1. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್ಇ 2021 ದಿನಾಂಕ: 12-02-2021ರಲ್ಲಿ ಸೂಚಿಸಿರುವಂತೆ ಕಾಲೇಜುಗಳು ಮುಂದಿನ ಎರಡು ವರ್ಷಗಳ ಒಳಗಾಗಿ ಸ್ಥಳೀಯ ವಿಚಾರಣ ಸಮಿತಿಯ ವರದಿಯಲ್ಲಿ ನಮೂದಿಸಲಾಗಿರುವ ಎಲ್ಲಾ ಎಂಟು Defined Parameters ಗಳನ್ನು ಪೂರೈಸಲು ಕ್ರಮವಹಿಸತಕ್ಕದ್ದು.
3. ಸರ್ಕಾರವು ನಿರ್ದೇಶಿಸಿರುವಂತೆ ಸಂಯೋಜಿತ ಕೋರ್ಸುಗಳಿಗೆ ಕಡ್ಡಾಯವಾಗಿ ಸರ್ಕಾರದ UUCMS ಪೋರ್ಟಲ್ ಮೂಲಕವೇ ಪ್ರವೇಶಾತಿಯನ್ನು ಮಾಡತಕ್ಕದ್ದು.
4. ನಿಗಧಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾನಿಲಯ ಅಂಗೀಕಾರ ನೀಡುವುದಿಲ್ಲ.

5. ಯಾವುದೇ ಕೋರ್ಸಿಗೆ/ಕೋರ್ಸುಗಳಿಗೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿಯಿಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.
6. ಸದರಿ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಲ್ಪಿಸುವಾಗ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಮೀಸಲಾತಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
7. ವಿಶ್ವವಿದ್ಯಾನಿಲಯವು, ಕಾಲೇಜಿನ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಪಾಲಿಸತಕ್ಕದ್ದು. ವಿಶ್ವವಿದ್ಯಾನಿಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾನಿಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಕೊಳ್ಳತಕ್ಕದ್ದು.
8. ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ವಿಶ್ವವಿದ್ಯಾನಿಲಯ ಕಾಲಕಾಲಕ್ಕೆ ನಿಗಧಿಪಡಿಸುವ ಪ್ರವೇಶ ಮತ್ತು ಇತರೇ ಶುಲ್ಕಗಳನ್ನು ಮೀರದಂತೆ, ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದ ಶೇಕಡಾ 50ರಂತೆ (ಸರ್ಕಾರಿ ಕಾಲೇಜುಗಳಿಗೆ ಶೇಕಡಾ 100ರಂತೆ) ವಿಶ್ವವಿದ್ಯಾನಿಲಯವು ಪ್ರಾಯೋಜಿಸುವ ವಿದ್ಯಾರ್ಥಿಗಳಿಂದ ಪ್ರವೇಶವನ್ನು ಮಾಡಿಕೊಳ್ಳತಕ್ಕದ್ದು.
9. ವೈಶಾಕ v/s ರಾಜಸ್ಥಾನದ ರಾಜ್ಯ ಸರ್ಕಾರದ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ದಿನಾಂಕ:13-8-1997ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿಯಿಂದ(ಬೋಧಕ/ಬೋಧಕೇತರ/ಆಡಳಿತ ಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕುಳ, ಲೈಂಗಿಕ ಕಿರುಕುಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ ಚುಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾಧಗಳನ್ನು/ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು.
10. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಕೋರ್ಸುಗಳ ಶಿಕ್ಷಣ ಕ್ರಮವನ್ನು ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು ಹಾಗೂ ಸೇವೆಯಲ್ಲಿರುವ ಬೋಧಕರುಗಳನ್ನು ಪ್ರಾಂಶುಪಾಲರು/ ಆಡಳಿತ ಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.
11. ವಿದ್ಯಾರ್ಥಿಗಳು ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ವಿತರಣೆಯನ್ನು ಮಾಡಿ ವಿಶ್ವವಿದ್ಯಾನಿಲಯಕ್ಕೆ ತಿಳಿಸತಕ್ಕದ್ದು.
12. ಕಾಲೇಜು ವಿದ್ಯಾರ್ಥಿಗಳ ಅಂಕಪಟ್ಟಿ, ಪದವಿ ಪ್ರಮಾಣ ಪತ್ರ ಹಾಗೂ ಇತರೇ ದಾಖಲೆಗಳನ್ನು ಮೂರು ತಿಂಗಳ ಅವದಿಯೊಳಗೆ ವಿದ್ಯಾರ್ಥಿಗಳಿಗೆ ನೀಡಬೇಕು. ಅವಧಿ ಮೀರಿದ ನಂತರ ತಮ್ಮಲ್ಲಿಯೇ ಉಳಿದುಕೊಂಡಿರುವ ಅಂಕಪಟ್ಟಿಗಳು ಮತ್ತು ಪದವಿ ಪ್ರಮಾಣ ಪತ್ರಗಳ ಬಗ್ಗೆ ಕುಲಸಚಿವರು (ಮೌಲ್ಯಮಾಪನ) ಇವರಿಗೆ ವರದಿ ನೀಡತಕ್ಕದ್ದು.
13. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ಸೆಮಿಸ್ಟರ್‌ನ ಪೂರ್ಣವಾಗದ ಅವಧಿಯ ಭೋದನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.
14. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.
15. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.
16. **2026-27**ನೇ ಸಾಲಿಗೆ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

17. ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್(NAAC) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.

18. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

ಆದೇಶದ ಮೇರೆಗೆ

31/1

ಕುಲಸಚಿವರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾಲಯ
ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು - 560 001

ಗೆ,

**ಪ್ರಾಂಶುಪಾಲರು,**

**St Francis College ,P.B No 3417, 8th Main 3rd Block Kormangala Bangalore-560034.**

ಪ್ರತಿಗಳು:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯ), ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-1.
2) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-1.
4) ಕುಲಪತಿಗಳು/ಕುಲಸಚಿವರು(ಮೌ)/ವಿತ್ತಾಧಿಕಾರಿಗಳು/ಆಪ್ತಸಹಾಯಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು-01
5) UUCMS Portal ಪ್ರತಿ.
6) ಕಛೇರಿ / ರಕ್ಷಾ ಕಡತ.